ಕರ್ನಾಟಕ ಅರಣ್ಯ ಇಲಾಖೆ

**KARNATAKA FOREST DEPTMENT**

**ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು**
**ಧಾರವಾಡ ವೃತ್ತ, ಧಾರವಾಡ ರವರ ಕಛೇರಿ**
**Office of the**
**Chief Conservator of Forests**
**Dharwad Circle, Dharwad**

**ಅರಣ್ಯ ಸಂಕೀರ್ಣ ಕೆ.ಸಿ.ಪಾರ್ಕ ಎದುರಿಗೆ,**
**ಪಿ.ಬಿ.ರಸ್ತೆ, ಧಾರವಾಡ–580008**
**Forest Campus, Near K C Park,**
**P.B.Road Dharwad-580008**
**Phone:0836-2448501**
**Email:ccfdharwadcircle@gmail.com**

---

ಪತ್ರ ಸಂಖ್ಯೆ: ಎ1/ಲ್ಯಾಂಡ್/FC/Trans/37754/2018/CR-/2020-21./100 ದಿನಾಂಕ: 29-04-2026. 30

ಇವರಿಗೆ,

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
(ಅರಣ್ಯ ಸಂರಕ್ಷಣೆ) ಹಾಗೂ ನೋಡಲ್ ಅಧಿಕಾರಿಗಳು, (ಅಸಂಕಾ),
ಅರಣ್ಯ ಭವನ, 18 ನೇ ಅಡ್ಡ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು.

ಮಾನ್ಯರೇ,

ವಿಷಯ: Diversion of 177.091 hectare of Forest land in Devalli, Payaswadi, Atle and 21 other villages in Dharwad, Haliyal Dandeli Wildlife (Kali Tiger Reserve) and Belagavi Divisions) for laying of Goa-tamnar 400 Kv Dc Quad Transmission line (I.H.O Project) in favor of manager, Goa-Transmission Project Limited. F1 Mira Corporate Suite. Main Mathura Road, Ishwar Nagar, New Delhi.

ಉಲ್ಲೇಖ: 1) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 4-KRA/1526/2025 Ban. Dated: 11-02-2026.
2) ಈ ಕಚೇರಿ ಪತ್ರ ಸಮಸಂಖ್ಯೆ ದಿನಾಂಕ: 06-03-2026.
3) ತಮ್ಮ ಕಚೇರಿ ಪತ್ರ ಸಂಖ್ಯೆ: KFD/HoFF/A52K(GFL)/15/2018-FC. ದಿನಾಂಕ: 31-03-2026.
4) ಈ ಕಚೇರಿ ಪತ್ರ ಸಮಸಂಖ್ಯೆ ದಿನಾಂಕ: 06-03-2026, 01-04-2026, 04-04-2026, 06-04-2026 ಮತ್ತು 07-04-2026.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಕೇಂದ್ರ ಸರ್ಕಾರದ ಪತ್ರದಲ್ಲಿ ಗೋವಾ-ತಮನ್ನಾರ ಪ್ರಸ್ತಾವನೆಯ ವಿಷಯವಾಗಿ EDS query ಮೂಲಕ ಕೆಲವೊಂದಿಷ್ಟು ನ್ಯೂನ್ಯತೆಗಳನ್ನು ಸರಿಪಡಿಸಿ ಸಲ್ಲಿಸಲು ಸೂಚಿಸಿದ್ದು ಇರುತ್ತದೆ. ಅದರನ್ವಯ, ಹಲವು ಪತ್ರ ವ್ಯವಹಾರಗಳ ನಂತರ ಸದರಿ ಗೋವಾ-ತಮನ್ನಾರ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಗದಗ ವಿಭಾಗದಲ್ಲಿ 250 ಹೆಕ್ಟರ್ ಮತ್ತು ಹಾವೇರಿ ವಿಭಾಗದಲ್ಲಿ 100 ಹೆಕ್ಟರ್ ಒಟ್ಟು 350 ಹೆಕ್ಟರ್ ಅರಣ್ಯ ಪ್ರದೇಶವನ್ನು ಪರಿಹಾರಾತ್ಮಕ ನೆಡುತೋಪು ಬೆಳೆಸಲು ಗುರುತಿಸಿ ಅನುಮತಿ ನೀಡಲು ಕೋರಲಾಗಿತ್ತು.

ಉಲ್ಲೇಖ (2) ರ ತಮ್ಮ ಕಚೇರಿ ಪತ್ರದಲ್ಲಿ ಸದರಿ 350 ಹೆಕ್ಟರ್ ಅರಣ್ಯ ಪ್ರದೇಶವನ್ನು ಪರಿಹಾರಾತ್ಮಕ ನೆಡುತೋಪು ಬೆಳೆಸಲು ಅನುಮತಿ ನೀಡಲಾಗಿರುತ್ತದೆ. ಹಾಗೂ ಸದರಿ ಪತ್ರದಲ್ಲಿ ಇನ್ನೂ 150 ಹೆಕ್ಟರ್ ಕ್ಷೀಣಿತ ಅರಣ್ಯ (Degraded Forest) ಪ್ರದೇಶವನ್ನು ಪರಿಹಾರಾತ್ಮಕ ನೆಡುತೋಪು ಬೆಳೆಸಲು ಗುರುತಿಸಿ ವರದಿ ಸಲ್ಲಿಸಲು ನಿರ್ದೇಶಿಸಲಾಗಿದೆ.

ಉಲ್ಲೇಖ (3) ರ ಈ ಕಚೇರಿ ಪತ್ರಗಳಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಗದಗ ಇವರ ವ್ಯಾಪ್ತಿಯಲ್ಲಿ 405 ಹೆಕ್ಟರ್ ಕ್ಷೀಣಿತ ಅರಣ್ಯ ಪ್ರದೇಶವನ್ನು ಗುರುತಿಸಲಾಗಿದ್ದು, ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಹಾವೇರಿ ವಿಭಾಗ ವ್ಯಾಪ್ತಿಯಲ್ಲಿ 100 ಹೆಕ್ಟರ್ ಒಟ್ಟು ಎರಡು ವಿಭಾಗಗಳಿಂದ 505 ಹೆಕ್ಟರ್ ಅರಣ್ಯ ಪ್ರದೇಶವನ್ನು ಗುರುತಿಸಲಾಗಿದೆ.

ಪ್ರಸ್ತುತ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಧಾರವಾಡ ವಿಭಾಗದಿಂದ ಪ್ರಸ್ತಾವನೆಯ ಭಾಗ-2 ರಲ್ಲಿ ಸದರಿ ಪ್ರಸ್ತಾವನೆಗೆ ಬಾಧಿತವಾಗುವ 175 ಹೆಕ್ಟರ್ ಅರಣ್ಯ ಪ್ರದೇಶದ ಬದಲಾಗಿ 350 ಹೆಕ್ಟರ ಕ್ಷೀಣಿತ ಅರಣ್ಯ ಪ್ರದೇಶದಲ್ಲಿ ಬೆಳೆಸಲು ಗುರುತಿಸಿರುವ ಪರಿಹಾರಾತ್ಮಕ ನೆಡುತೋಪಿನ ವಿವರಗಳನ್ನು ನಮೂದಿಸಿ, ಪರಿವೇಶ ವೆಬ್ ಪೋರ್ಟಲ್‌ನಲ್ಲಿ KML ಫೈಲ್, ನಕಾಶೆ, ಪ್ರಮಾಣ ಪತ್ರಗಳು ಇತ್ಯಾದಿ ದಾಖಲೆಗಳನ್ನು ಅಪ್‌ಲೋಡ ಮಾಡಿ ಈ ಕೆಳ ಸಹಿದಾರರ ಲಾಗಿನ್‌ಗೆ ಸಲ್ಲಿಸಿರುತ್ತಾರೆ. ಮುಂದುವರೆದು, ಸದರಿ ಪ್ರಕರಣದ ಗೋವಾ ಭಾಗದ ಉಳಿದ 155 ಹೆಕ್ಟರ್ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಅವಶ್ಯವಿರುವ ಅರಣ್ಯ ಪ್ರದೇಶಗಳ ವಿವರಗಳನ್ನು ಪೆನ್‌ಡ್ರೈವನಲ್ಲಿ ಭರಿಸಿ, ಈ ಪತ್ರಕ್ಕೆ ಲಗತ್ತಿಟ್ಟು ಮುಂದಿನ ಕ್ರಮಕ್ಕಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
ಧಾರವಾಡ ವೃತ್ತ, ಧಾರವಾಡ.